

ಗಲಿಬಿಲಿ ಪಡುವಷ್ಟು ಸಮಾನತೆ ಎರಡೂ ತುದಿಗಳಲ್ಲಿಯೂ ಕಾಣಸಿಗುತ್ತದೆ. ಸೀರೆಯನ್ನು ನೇಯ್ದ ನೇಕಾರನಿಗೂ ನೇರ ಹಾಗೂ ಹಿಂದಿನ ಬದಿಗಳು ತಿಳಿಯುವುದಿಲ್ಲವಂತೆ.

ಪಟೋಲ ಸೀರೆಗಳಿಗೂ, ಸೀರೆಯ ಅಂಗಡಿಗಳಿಗೂ ಯಾವ ಸಂಪರ್ಕವೂ ಇಲ್ಲ. ಸಂಪರ್ಕವೇನಿದ್ದರೂ ಗ್ರಾಹಕ ಮತ್ತು ತಯಾರಕರ ಮಧ್ಯೆ ಮಾತ್ರ. ಸೀರೆ ನೇಯುವ ಸ್ಥಳಕ್ಕೆ ಬಂದು, ಬೇಕಾದ ವಿನ್ಯಾಸ ಹಾಗೂ ಬಣ್ಣಗಳನ್ನು ತಿಳಿಸಿದ ನಂತರವೇ ಸೀರೆಯ ತಯಾರಿ ಆರಂಭವಾಗುತ್ತದೆ. ತಯಾರಿಯಲ್ಲಿ ಸುಮಾರು 34 ಜನರು ತೊಡಗಿಸಿಕೊಂಡರೆ, ಸೀರೆ ಗ್ರಾಹಕನ ಕೈ ಸೇರಲು ಸುಮಾರು ಆರರಿಂದ ಎಂಟು ತಿಂಗಳುಗಳು ಬೇಕು. ಪಟೋಲ ಸೀರೆಗಳು ಹಳತಾಗಿ ಹರಿಯಬಹುದೇ ಹೊರತು ಸುಮಾರು ನೂರು ವರ್ಷಗಳವರೆಗೂ ಸೀರೆಯ ಬಣ್ಣವಾಗಲಿ ವಿನ್ಯಾಸವಾಗಲಿ ಮಾಸುವುದಿಲ್ಲವೆಂದು ಹೆಮ್ಮೆಯಿಂದ ಮೆಹುಲ್ ಸಾಲ್ವಿ ಹೇಳುತ್ತಾರೆ. ಚಿನ್ನದ ಆಭರಣಗಳ ಹಾಗೆ, ಹಳತಾದಂತೆ ಸೀರೆಯ ಮೌಲ್ಯವೂ ಹೆಚ್ಚಾಗುವುದಂತೆ.

ಸೀರೆಯನ್ನು ನೇಯಲು ಕೈಮಗ್ಗವನ್ನು ಬಳಸುತ್ತಾರೆ. ಚೌಕಟ್ಟಿನ ಆಕಾರದಲ್ಲಿರುವ ಕೈಮಗ್ಗಕ್ಕೆ ಹೊಲಿಗೆ ಯಂತ್ರದಂತೆ ಕಾಲಿನ ಪೆಡಲ್ ಸಹ ಇಲ್ಲ. ಯಾವುದೇ ವಿದ್ಯುತ್ಚಾಲಿತ ಮಗ್ಗ, ಕಂಪ್ಯೂಟರ್‌ಗಳ ಬಳಕೆ ಇಲ್ಲದೆ, ಕೇವಲ ಮಾನವನ ಕಲ್ಪನಾ ಶಕ್ತಿ, ಪರಿಶ್ರಮ, ಟೀಮ್‌ವರ್ಕ್‌ಗಳ ಒಟ್ಟು ಮೊತ್ತವೇ ಪಟೋಲ ಸೀರೆ ಎನ್ನಬಹುದು. ಇಂತಹ ಕೈಮಗ್ಗ ಇಡೀ ವಿಶ್ವದಲ್ಲಿಯೇ ವಿಶಿಷ್ಟವಾದದ್ದು. ಸೀರೆಯ ಮೇಲೆ ಗ್ರಾಫಿಕ್, ಪೌರಾಣಿಕ ಇಲ್ಲವೆ ಪ್ರದರ್ಶನಕ್ಕಿರಿಸಿದ ಸೀರೆಗಳಲ್ಲಿ ನೀವು ಸೂಚಿಸುವ ಬಣ್ಣ, ಡಿಸೈನ್‌ಗಳನ್ನು ಬಳಸಿ ನಿಮಗೆ ಒಪ್ಪಿತವಾಗುವಂತೆ ನೇಯುವ ಜವಾಬ್ದಾರಿ ಅವರದು. ಡಿಸೈನ್‌ಗಳ ಅಳವಡಿಕೆಗೆ ಅವರು ಬಳಸುವ ಮಾಪನ, ಮೈಕ್ರೋ ಸೆಂಟಿಮೀಟರ್ ನಷ್ಟು ಕರಾರುವಾಕ್ಕಿನದು. ಮೃದುವಾದ ರೇಷ್ಮೆ ಎಳೆಗಳನ್ನು ದಾರದಿಂದ ಕಟ್ಟಿ, ನೀರಿನಲ್ಲಿ ನೆನೆಸಿ, ಮಿಕ್ಕ ಭಾಗಗಳಿಗೆ ವರ್ಣದ್ರವ್ಯವನ್ನು ಲೇಪಿಸಲಾಗುತ್ತದೆ. ಡಿಸೈನ್‌ಗಳಿಗನುಸಾರವಾಗಿ ಬಣ್ಣಗಳ ಲೇಪನ ಪುನರಾವರ್ತನೆಯಾಗುತ್ತದೆ. ಸೀರೆಗಳ ಮೇಲೆ, ಗಿಣಿ, ಕಮಲ, ಆನೆ, ಪಕ್ಷಿಗಳು, ನೃತ್ಯಾಂಗನೆಯರ ಚಿತ್ರಗಳ ಡಿಸೈನ್‌ಗಳನ್ನೇ ಹೆಚ್ಚಾಗಿ ಮಹಿಳೆಯರು ಆಯ್ಕೆ ಮಾಡಿಕೊಳ್ಳುತ್ತಾರೆ.

## ಬೆಲೆ ಕೇಳಿ ಬೆವರದಿರಿ

ಪಟೋಲ ಸೀರೆಗಳ ಬೆಲೆ ಅತಿ ಕಡಿಮೆಯೆಂದರೆ ಒಂದೂವರೆ ಲಕ್ಷ ರೂಪಾಯಿಗಳು. ಸುಮಾರು ಏಳು ಲಕ್ಷ ರೂಪಾಯಿ ಮುಖಬೆಲೆಯ ಸೀರೆಗಳೂ ಇಲ್ಲಿವೆ. ಸೀರೆಗೆ ಅಷ್ಟೊಂದು ಹಣ ಖರ್ಚು ಮಾಡಲು ಸಾಧ್ಯವಾಗದೆ ನಲವತ್ತು ಸಾವಿರ ತೆತ್ತು, ಪಟೋಲ ದುಪ್ಪಟ್ಟಾ ಖರೀದಿಸು ವವರು ಇಲ್ಲದಿಲ್ಲ. ಇನ್ನು ಪಟೋಲಾ ಕರವಸ್ತ್ರದ ಬೆಲೆಯೇ ಮೂರರಿಂದ ನಾಲ್ಕು ಸಾವಿರ ರೂಪಾಯಿಗಳು. ಪಟೋಲ ಸೀರೆಗಳನ್ನು ತಯಾರಿಸುತ್ತಿದ್ದ 700 ಕುಟುಂಬಗಳಲ್ಲಿ ಈಗ ಕೇವಲ ಮೂರು ಕುಟುಂಬಗಳಷ್ಟೇ ಈ ಶ್ರೀಮಂತ ಪರಂಪರೆಯನ್ನು ಮುಂದುವರಿಸಿಕೊಂಡು ಬರುತ್ತಿವೆ. ನುರಿತ ಕೆಲಸಗಾರರು ಸಿಗದ ಸಮಸ್ಯೆಯೂ ತಯಾರಕರನ್ನು ಕಾಡುತ್ತಿದೆ.

'ಡಿಸೈನ್‌ಗಳ ಚಿತ್ರಣದ ನಂತರ, ಇಪ್ಪತ್ತು ವಿವಿಧ ಹಂತಗಳನ್ನು ದಾಟಿದ ನಂತರವೇ ಪಟೋಲ ಸೀರೆ, ಗ್ರಾಹಕರ ಕೈ ಸೇರುತ್ತದೆ. ಗುಣಮಟ್ಟದಲ್ಲಿ, ಬೆಲೆಯಲ್ಲಿ ಮಾತ್ರ ಯಾವ ರಿಯಾಯತಿಯೂ ಸಾಧ್ಯವಾಗದು' ಎನ್ನುತ್ತಾರೆ ಮೆಹುಲ್. ಇಂದಿರಾ ಗಾಂಧಿಯವರು ತೊಟ್ಟ ಪಟೋಲ ಸೀರೆ, ಇನ್ನೂ ಸೋನಿಯಾ ಗಾಂಧಿಯವರ ಬಳಿಯಿದೆಯಂತೆ. ದಿ. ನರ್ಗಿಸ್ ದತ್, ದಿ.ರಾಜೀವ್ ಗಾಂಧಿ, ಅಮಿತಾಬ್ ಬಚ್ಚನ್ ಮುಂತಾದ ಗಣ್ಯರು ಪಟೋಲ ಸೀರೆಗಳನ್ನು ಖರೀದಿಸಿರುವರಂತೆ. ಉಳ್ಳವರು ಶಿವಾಲಯವ ಮಾಡುವರಲ್ಲವೇ?